ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 293.

ಮೃತಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಶಿವಮೊಗ್ಗ ಕಸಬಾದಲ್ಲಿರುವ ಕೈಲಾಸದ ರಹಿಮ್ಮಾನ್‌ಸಾಬರ ಮಕ್ಕಳು 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ್ ಟೀಪೂಸಾಬಿ, ಮೃತಪಟ್ಟ ಸದರೀ ಅಬ್ದುಲ್ ರಹಿಮ್ಮಾನ್‌ಸಾಬರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ್ ಟೀಪೂಸಾಬಿ ಎಂಬವರು, ಶಿವಮೊಗ್ಗ ವಾಸಸ್ಥರಾಗಿ ಮೃತ ಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಬೆಂದಗಿ ಬಗ್ಗಾಗಿ ಒರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ್ ಟೀಪೂಸಾಬಿ ಇವರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿರುದ್ಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 294.

ಮೃತಪಟ್ಟ ಪರಿವಾರದ ಗುಂಡೇರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಶಿವಮೊಗ್ಗದಲ್ಲಿ [illegible]ರುವ ಪರಿವಾರದ ಸುಬ್ಬಾಯ, ಮೃತಪಟ್ಟ ಸದರೀ ಪರಿವಾರದ ಗುಂಡೇರಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಪರಿವಾರದ ಸುಬ್ಬಾಯನು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಪರಿವಾರದ ಗುಂಡೇರಾಯನ ಬೆಂದಗಿ ಬಗ್ಗಾಗಿ ಮೈಸೂರು ಮಹಾರಾಜರವರ ಸ್ವಿನ್ನಿಂಗ್ ಅಂಡ್ ಮ್ಯಾನ್ಯು ಫಕ್ಚರಿಂಗ್ ಕಂಪೆನಿಯಿಂದಲೂ ಮತ್ತು ಹೊರಗಿನಿಂದಲೂ ಒರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪರಿವಾರದ ಸುಬ್ಬಾಯರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಿವಾರದ ಗುಂಡೇರಾಯರ ಆಸ್ತಿಗೆ ಹಕ್ಕುದಾರರಾದ ವಿರುದ್ಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಮೇ [illegible]ಂಗಳ 5ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತ್ಯೂ ಇನೇ ಕೊಡಿಸಲಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ಎಕ್ಸೈಜ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಏಪ್ರಿಲ್ 28ನೇ ಮಂಗಳವಾರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳಲ್ಲಿ ಬಗೆಣಿ ಕೇಂದಿ ಉತಾರು ಮತ್ತು ಮಾರುವ ಹಕ್ಕು ಸ್ಯ 1896ನೇ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯವ್ಯೇನ ಆಗಲಿ ಆಯಾ ತಾಲ್ಲೂಕ್ ಬಾಜಾರದಲ್ಲಿ ನಮೂದಿಸುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸುವ ಪರತ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕ್ ಕಲೆಕ್ಟರ ರೂಬರೂ, ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಅಥವಾ ಅಮಲ್ದಾರ್‌ರವರಿಂದಲಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖ್.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯತು 29ರವರಿಗೆ
2. ಮೂಡಿಗೆರೆ	ದಿವೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂನ್ ತಿಂಗಳ 3ನೇ ತಾರೀಖು ಲಾಗಾಯತು 5ರವರಿಗೆ
4. ಯಡಿಯೂರು	ಜೂನ್ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಬಂದು ಸರ್ಕಲ್ ಗುತ್ತಿಯು ಚಿಡವರ ಪರತ್ತುದಾರನಿಗೆ ಕೊಡಲ್ಪಡುವದು. ಸದರಿ ಚಿಡ [illegible] ಕಳದ ಸಾಲ್ ವೊಖಲೆಗೆ ಕಮ್ಮಿ ಇರಕೂಡದು. ಈ ಹರಾಜು ಡೆಪ್ಯೂಟಿ ಕಮ್ಮಿಷನರವರ ಮಂಜೂ [illegible]ಗಿ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯೂಟಿ ಕ [illegible]. ಡೆಪ್ಯೂಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಿಡ ದರಖಾಸ್ತನ್ನಾದ [illegible] ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

3. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟ ಉಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕಾಯಮವಾಗಿ ಅಧಿಕಾರ ಹೊಂದಿದ ಮುಕ್ತಾರೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು.

4. ಡೆಪ್ಯೂಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಹೆಚ್ಚಿದರವಾಸ್ತುದಾರನು ಸದರಿ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರವಾಸ್ತು ಪೂರಾ ಮೊಬಲಗು ಹರಾಜು ಮಾಡಿಸತಕ್ಕ ಆಫೀಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು, ಮತ್ತು ನಷ್ಟ ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೊ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಪಡಿ ಮಿಪಾಜಿಟ್ ಮಾಡಬೇಕು. ಡೆಪ್ಯೂಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಮೊದಲು ಇಡೋಣಾದ ಕೈವಣಿ ದೇಖೀಲ್ ಸಾಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗಿ ಯಾಗಲಿ ಅಥವಾ ಗವರ್ನಮೆಂಟ್ ಪತ್ರಮೂಲಕವಾಗಿ ಯಾಗಲಿ ಅವಲ್‌ದಾರ್‌ಲ್ಲಿ ಹಾಜರ್ ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಪರವಾಗಿ ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿದೆಯಂದು ಸದರೀ ಪತ್ರ ಜೈಲ್ ಡೆಪ್ಯೂಟಿಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವಾಸಿ ನಗದಾಗಿಯಾಗಲೀ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿಕೊಟ್ಟ ಗವರ್ನಮೆಂಟ್ ಪತ್ರಮೂಲಕವಾಗಿಯಾಗಲೀ ಬಾಕಿ ಅರ್ಧಭಾಗ ಸ್ಥಿರಸ್ವತ್ತು ಮೂಲಕ ಜಾಮೀನಿಕೊಡಬಹುದು. ಹಾಗೆ ಆಧಾರ ಮಾಡಿಸಿದ ಸ್ಥಿರಸ್ವತ್ತಿನ ಪೈಕಿ ಜಾಮೀನಿ ಮೊಬಲಗಿನ ಎರಡರಷ್ಟು ಪೈಯಿದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಕೈವಣಿ ಇಟ್ಟ ಮೊಬಲಗು ಆಫೈರ್ ಮೂರು ತಿಂಗಳ ಪರ್ಯಂತ ಬಡ್ಡಿಯನ್ನು ಬಗ್ಗೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜಾದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೆನೆಂತ ಕಾಯಮವಾದ ಸ್ವಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರೆಕೊಡತಕ್ಕದ್ದಾಗಿರುತ್ತೆ.

5. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೇ ತಪ್ಪಿದರೂ ಅಥವಾ ಮುಚ್ಚಳಿಕೆ ಬರೆಕೊಡದೆ ತಿರಸ್ಕರಿಸಿದರೂ ಪುನಃ ಹಾಜರ್ ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಡಲ್ಪಡುತ್ತಲ್ಲದೆ ಬಾಬ್ತು ಪುನಃ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿ ಯಾಗಲೀ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಉಕ್ಸಾನು ಏನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು (ಜಮೀನು) ಕಂದಾಯದ ಬಾಕಿಯಂತೆ ಸದರಿಯವನ ಬೆಂದಿಗಿ ಇಟ್ಟು ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

6. ಪ್ರತಿ ಒಬ್ಬ ಉತ್ತಾರದಾರನೂ ಎಕ್ಸೈಸ್ ಆಕ್ಟ್ 6ನೇ ಸೆಕ್ಷನ್ ಅನುಸರಿಸಿ ಡೆಪ್ಯೂಟಿ ಕಮ್ಮಿಷನರವರಿಂದ ವಂದು ಲೈಸೆನ್ಸು ಪಡಿಯತಕ್ಕದ್ದು.

7. ಸರ್ಕಾರಿಂದ ಲೈಸನ್ಸು ರೂಲ್ಸು ಮಂಜೂರಾಗುವ ವರಿಗೂ ಗುತ್ತಿಗೆದಾರನು ತನ್ನ ಫಿರ್ಕಾಕ್ಕೆ ಸಮ್ಮಂಧಪಟ್ಟ ಅಂಗಡಿಗಳಲ್ಲಿ ಸೇಂದಿ ಬಿಕರೀ ಬಗ್ಗೆ ಎಕ್ಸೈಜ್ ಆಕ್ಟ್ 16ನೇ ಸೆಕ್ಷನ್ ಪ್ರಕಾರ ಆಪ್ಷನ್ ಚೀಟು ಕೊಡಬಹುದು.

8. ಈಚಲು ಕೇಂದಿ ಕಂಟ್ರಾಕ್ಟ್ ವಿಷಯದಲ್ಲಿ ಹಾಲಿ ಜಾರೀಲಿರುವ ಷರತ್ತುಗಳು ಈ ಬಗ್ಗೆ ಕೇಂದಿ ಇಷಾರೆ ಬಗ್ಗೆ ಅನ್ವಯಿಸಲ್ಪಡುತ್ತೆ.

9. ಹಿಂದಿನ ಸಾಲಗಳ ಬಗ್ಗೆ ಕೇಂದಿ ಹಂಪ್ಪುವಳಿ ಮತ್ತು ಇತರ ತ್ಯೋಲ್ ತಿಳಿಯಬೇಕಾಗಿದ್ದರೆ ತಾಲ್ಲೂಕ್ ಅವಲ್‌ದಾರ್ರು ಅಥವಾ ಸಿರಸ್ತೇದಾರ್ಲಲ್ಲಿ ದರಖಾಸ್ತು ಕೊಟ್ಟು ತಿಳುಕೊಳ್ಳಬಹುದು.

10. ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಬಾಕಿ ಎಲ್ಲಾ ಸಂಗತಿಗಳು ಹರಾಜು ಮಾಡಿಸುವ ಆಫೀಸರಿಂದ ಹರಾಜು ಕಾಲದಲ್ಲಿ ತಿಳಿಸಲ್ಪಡುವದು.

ಎಚ್. ಎಚ್. ಸ್ಪರ್ಕ್ಸ್, ಡೆಪ್ಯೂಟಿ ಕಮ್ಮಿಷನರ್, ಕಡೂರ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 10ನೇ ಮೇ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಜಪ್ತುಬೀನೆ ಮತ್ತು ಕಂಬಿಂಯು ಮತ್ತು ಪಸಾರೆ ಸಾವರ್ಸ್ ಕಡೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಆವುಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಮತ್ತು ಡೆಪ್ಯೂಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರುಗಳಿಂದ ಹರಾಜು ಮಾಡಿಸಲ್ಪಡುವದು.

ನಾಟುಗಳ ತಪ್ಸೀಲ್.	ಲಕ್ಕುವಳ್ಳಿ ಡಿಪೋ.			ತರೀಕರೆ ಡಿಪೋ.			ಷರಾ.
	ಆದದು.	ಸಲೆ ಆಡಿ.	ಹರಾಜು ತಾರೀಖು.	ಆದದು.	ಸಲೆ ಆಡಿ.	ಹರಾಜು ತಾರೀಖು.	
ನಾಟೂ ..	480	10,500	1896ನೇ ಇಸವಿ ಜೂನ್ 16ನೇ ತಾರೀಖು.	42	639	1896ನೇ ಇಸವಿ ಜೂನ್ 18ನೇ ತಾರೀಖು.	
.. ..	250	6,500		13	285		
ನಾಟೂ ..	120	3,000		17	388		
.. ..	150	1,200		480	1,510		
ಳು ..	40	390		680	4,950		
..	25	280		..	..		
ಗಳು ..	..	..		2,968	..		
.. ..	..	..		10,000	..		
..	40 ಮಣ	..		..	..		